ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 120/2016

(ಫ್ರಾಸಾ-2 ಚಾಸಾ-4 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 20.02.2023

| | | |
|---|---|---|
| ಸಾಕ್ಷಿದಾರರ ಹೆಸರು | - | ಜಯಪ್ರಕಾಶ್ |
| ತಂದೆಯ ಹೆಸರು | - | ಮರಿಯಪ್ಪ |
| ವಯಸ್ಸು | - | 28 ವರ್ಷ, |
| ಉದ್ಯೋಗ | - | ಕೂಲಿ ಕೆಲಸ |
| ವಾಸ | - | ನೆಲಮಂಗಲ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಫ್ರಾಸಾ-1 ಇವರ ಪರಿಚಯ ಇದೆ. ಆಕೆ ಪರಿಶಿಷ್ಟ ಜಾತಿಯ ಬೋವಿ ಜಾತಿಯವರು. ಅವರ ಜಮೀನು ಮಂಟನಕುರ್ಚಿ ಜಮೀನು ಇದೆ. ಆ ಜಮೀನಿನಲ್ಲಿ ಮನೆ ಕಟ್ಟಲು ಪಾಯ , ಒಂದು ಶೆಡ್, ಒಂದು ಬೋರ್ ಇತ್ತು ಮತ್ತು ಹುರಳಿ ಗಿಡಗಳನ್ನು ಬೆಳಸಿದ್ದರು. ಆ ಜಮೀನನ್ನು ನಾನೇ ನೋಡಿಕೊಳ್ಳುತ್ತಿದ್ದೆ. ನ್ಯಾಯಾಲಯದ ಮುಂದೆ ಇರುವ 1 ಮತ್ತು 3 ನೇ ಆರೋಪಿತರನ್ನು ನಾನು ನೋಡಿಲ್ಲ. ಗೈರು ಹಾಜರಾಗಿರುವ ಮತ್ತು ಮೃತವಾಗಿರುವ ಈಗ ಹೆಸರು ಓದಿ ಹೇಳಿದ ಆರೋಪಿತರ ಪರಿಚಯ ಸಹ ಇಲ್ಲ.

2. ಈಗ ಸುಮಾರು 7-8 ವರ್ಷಗಳ ಹಿಂದೆ ಬೆಳಗಿನ ಜಾವ ಸುಮಾರು 6-7 ಘಂಟೆಗೆ ಸುಮಾರು 6-7 ಜನ ಟ್ರಾಕ್ಟರ್, ಜೆಸಿಬಿಗಳನ್ನು ತೆಗೆದುಕೊಂಡು ಬಂದು ನಾನು ನೋಡಿಕೊಳ್ಳುತ್ತಿದ್ದ ಫ್ರಾಸಾ-1 ಇವರ ಜಮಿನಿನಿಗೆ ಬಂದು ಕಲ್ಲು ಕೂಚಗಳನ್ನು ಕಿತ್ತಿ ಪಾಯಗಳನ್ನು ಕಿತ್ತಿ ಬೆಳೆಯನ್ನು ನಾಶ ಮಾಡಿದರು. ನಾನು ಈ ವಿಷಯವನ್ನು ಫ್ರಾಸಾ-1 ಇವರಿಗೆ ಫೋನ್ ಮಾಡಿ ತಿಳಿಸಿದೆ. ಅವರು ಸುಮಾರು ಒಂದೆರಡು ತಾಸಿನ ನಂತರ ಬಂದರು. ಫ್ರಾಸಾ-1 ಇವರು ಬಂದಾಗ ಜಮೀನಿನ ಹತ್ತಿರ ಬಂದ 7-8 ಜನರು ಅಲ್ಲೇ ಇದ್ದರು. ಫ್ರಾಸಾ-1 ಇವರು ಯಾಕೆ ಈ ರೀತಿ ಮಾಡುತ್ತಿದ್ದೀರಾ ಎಂದು ಅವರಿಗೆ

ಕೇಳಿದರು. ಆಗ ಅಲ್ಲಿ ಬಂದಿದ್ದವರು ಜಮೀನು ನಮ್ಮದು ಎಂದು ಪ್ರಾಸಾ-1 ಈಕೆಗೆ ಹೊಡೆಯಲು ಹೋದರು. ನಾನು ಮತ್ತು ಅಲ್ಲಿದ್ದ 4-5 ಜನರು ಪ್ರಾಸಾ-1 ಈಕೆಯನ್ನು ರಕ್ಷಣೆ ಮಾಡಿದರು. ಬಂದಿದ್ದವರು ಪ್ರಾಸಾ-1 ಈಕೆಗೆ ಅಮ್ಮನ್ ಅಕ್ಕನ್ ಎಂದೆಲ್ಲಾ ಕೆಟ್ಟಕೆಟ್ಟದಾಗಿ ಬೈಯುತ್ತಿದ್ದರು. ವಡ್ಡರು ನೀವು ನಿಮಗೆಲ್ಲಾ ಜಮೀನು ಬೇಕಾ ಎಂದು ಸಹ ಬೈಯುತ್ತಿದ್ದರು. ಪ್ರಾಸಾ-1 ಈಕೆಗೆ ಸಾಯಿಸುವುದಾಗಿ ಬೆದರಿಕೆ ಹಾಕಿದರು. ಘಟನೆಗೆ ಸಂಬಂಧಿಸಿದಂತೆ ಪ್ರಾಸಾ-1 ಇವರು ದೂರನ್ನು ನೀಡಿದ್ದಾರೆ. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ.

3. ಜಮೀನಿಗೆ ಬಂದವರು ಕಾರಲ್ಲಿ ಕೆಲವರು ಮತ್ತು ಟ್ರಾಕ್ಟರ್ ನಲ್ಲಿ ಕೆಲವರು ಬಂದಿದ್ದರು. ಸದರಿ ಟ್ರಾಕ್ಟರ್ ಮತ್ತು ಕಾರ್ ನೋಡಿದರೆ ಗುರ್ತಿಸುತ್ತೇನೆ. ಈಗ ತೋರಿಸಿದ ಫೋಟೋಗಳಲ್ಲಿರುವ ಕಾರಿನಲ್ಲಿ ಬಂದಿದ್ದರು. ಸಾಕ್ಷಿದಾರರಿಗೆ ತೋರಿಸಿದ ಫೋಟೋಗಳು ನಿಪಿ-4 ರಿಂದ 7 ಎಂದು ಗುರ್ತಿಸಲಾಗಿದೆ. ನಿಪಿ-8 ರಿಂದ 10 ಇವುಗಳಲ್ಲಿರುವ ಕಲ್ಟಿವೇಟರ್ ಅನ್ನೇ ಟ್ರಾಕ್ಟರ್ ಗೆ ಜೋಡಿಸಿದ್ದರು. ಬಂದವರು ಆ ರೀತಿ ನಷ್ಟ ಮಾಡಿದ್ದರಿಂದ ಪ್ರಾಸಾ-1 ಇವರಿಗೆ ಅಂದಾಜು 6-7 ಲಕ್ಷದಷ್ಟು ನಷ್ಟ ಆಗಿರಬಹುದು. ಈಗ ತೋರಿಸಿದ ಮು.ಮಾ-1 ರಿಂದ 4 ಇವುಗಳು ಆರೋಪಿತರು ಡ್ಯಾಮೇಜ್ ಮಾಡಿದ್ದ ವಸ್ತುಗಳದ್ದು ಇವೆ. ಘಟನೆಯನ್ನು ಚಾಸಾ-7, 8 ಮತ್ತು 2 ನೋಡಿದ್ದಾರೆ. ಪೋಲಿಸರು ನನ್ನ ಹೇಳಿಕೆ ಪಡೆದಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

4. ನ್ಯಾಯಾಲಯದ ಮುಂದೆ ಇರುವ 1 ಮತ್ತು 3 ನೇ ಆರೋಪಿತರು ಜಮೀನಿಗೆ ಬಂದು ಗಲಾಟೆ ಮಾಡಿದವರಲ್ಲಿ ಇದ್ದಾರೆ ಎಂದರೆ ಸರಿ. ಆ ರೀತಿ ಒಟ್ಟು 13 ಜನ ಬಂದು ಗಲಾಟೆ ಮಾಡಿದ್ದಾರೆ ಎಂದರೆ ಸರಿ. ಉಳಿದವರು 2, 4 ರಿಂದ 13 ನೇ ಆರೋಪಿತರು (ಸಾಕ್ಷಿದಾರರಿಗೆ ಸದರಿ ಆರೋಪಿತರ ಹೆಸರನ್ನು ಓದಿ ಹೇಳಲಾಗಿದೆ) ಇರುತ್ತಾರೆ ಎಂದರೆ

ಸಾಕ್ಷಿದಾರರು ಅವರನ್ನು ಸರಿಯಾಗಿ ನೋಡಿಲ್ಲ ಎನ್ನುತ್ತಾರೆ. (2, 4 ರಿಂದ 12 ನೇ ಆರೋಪಿತರು ಗೈರು ಹಾಜರಿದ್ದು ಅವರ ಐಡೆಂಟಿಟಿಯನ್ನು ತಕರಾರು ಮಾಡುವುದಿಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. 13 ನೇ ಆರೋಪಿ ಮೃತ ಹೊಂದಿರುತ್ತಾರೆ). ಫ್ರಾಸಾ-1 ಈಕೆಗೆ ವಡ್ಡರ ಮುಂಡೆ ಎಂದು ಬೈದು ಜಮೀನಿಗೆ ಬಂದರೆ ಕತ್ತರಿಸಿ ಹಾಕುವುದಾಗಿ ಆರೋಪಿತರೆಲ್ಲಾ ಹೇಳಿದರು ಎಂದರೆ ಸರಿ. ಆರೋಪಿತರೆಲ್ಲಾ ಫ್ರಾಸಾ-1 ಈಕೆಯ ಕುತ್ತಿಗೆ ಹಿಡಿದು ಆಕೆಯನ್ನು ಜಮೀನಿನಿಂದ ಹೊರಗೆ ತಳ್ಳಿದರು ಎಂದರೆ ಸರಿ. ಚಾಸಾ-5 ಮತ್ತು 6 ಇವರು ಸಹ ಗಲಾಟೆ ನೋಡಿದ್ದು ನನ್ನೊಂದಿಗೆ ಫ್ರಾಸಾ-1 ಈಕೆಯನ್ನು ಬಿಡಿಸಿಕೊಂಡಿದ್ದಾರೆಂದರೆ ಸರಿ. ಜಮೀನಿಗೆ ಬಂದು ಗಲಾಟೆ ಮಾಡಿದವರು ಈ ಪ್ರಕರಣದ 1 ರಿಂದ 13 ನೇ ಆರೋಪಿತರು ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಮಧ್ಯಾಹ್ನ ಪಾಟೀ ಸವಾಲು ಮಾಡುವುದಾಗಿ ತಿಳಿಸಿದ್ದರಿಂದ ಮಧ್ಯಾಹ್ನಕ್ಕೆ ಮುಂದೂಡಲಾಯಿತು.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ** (ಆರೋಪಿ ಪರ ವಕೀಲರು ಫ್ರಾಸಾ-1 ಇವರ ಪಾಟೀ ಸವಾಲು ಮಾಡಲು ಪುನಃ ಕರೆಸುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆ ಸಾಕ್ಷಿಯ ಪಾಟೀ ಸವಾಲಿನ ನಂತರ ಈ ದಿನ ವಿಚಾರಣೆಯಾದ ಸಾಕ್ಷಿಗಳ ಪಾಟೀ ಸವಾಲು ಮಾಡುವುದಾಗಿ ತಿಳಿಸುತ್ತಾರೆ. ಆದ್ದರಿಂದ ಈ ಸಾಕ್ಷಿಯ ಪಾಟೀ ಸವಾಲಿಗೆ ಸವಯ ಕೋರುತ್ತಾರೆ. ಸಾಕ್ಷಿಯ ಪಾಟೀ ಸವಾಲು ಮುಂದುಾಡಲು ಅದು ಸಕಾರಣ ಇರುವುದಿಲ್ಲ. ಆದರೆ ನ್ಯಾಯಾಲಯದ ಸಮಯ ಸಂಜೆ 04.30 ಆಗಿದ್ದು ಹಳೆಯ ಪ್ರಕರಣಗಳ ವಿಚಾರಣೆ ಇರುವುದರಿಂದ ಅವರ ಮನವಿಯನ್ನು ಪರಿಗಣಿಸಿ ರೂ.500/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು